ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 40 ಹೆಕ್ಟೇರ್‌ನಿಂದ 2000 ಹೆಕ್ಟೇರ್ ಅಚ್ಚುಕಟ್ಟು ಹೊಂದಿರುವ 3304 ಕೆರೆಗಳು ನಿರ್ವಹಣೆಯಲ್ಲಿರುತ್ತವೆ. ಈ ಪೈಕಿ ಕೆಲವು ಕೆರೆಗಳು ಒತ್ತುವರಿಯಾಗಿರುತ್ತವೆ. ಬಹುತೇಕ ಕೆರೆಗಳು ಪುರಾತನ ಕೆರೆಗಳಾಗಿದ್ದು, ಈ ಕೆರೆಗಳ ಜಮೀನನ್ನು ವಿವಿಧ ಪ್ರಮಾಣದಲ್ಲಿ ಒತ್ತುವರಿಯಾಗಿರುತ್ತವೆ. ಈ ಕೆರೆಗಳ ಭೂಮಾಪನ ಕಾರ್ಯವನ್ನು ಕೈಗೊಂಡು ನಿರ್ದಿಷ್ಟವಾಗಿ ಎಷ್ಟು ವಿಸ್ತೀರ್ಣ ಒತ್ತುವರಿಯಾಗಿದೆ ಎಂಬುದನ್ನು ತಿಳಿದುಕೊಂಡು ಒತ್ತುವರಿಯನ್ನು ತೆರವುಗೊಳಿಸಲು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಒತ್ತುವರಿಯಾಗಿರುವ ಪ್ರದೇಶವನ್ನು ಭೂಮಾನ ಮಾಡಲು ಭೂಮಾಪಕರುಗಳ ಕೊರತೆ ಇರುತ್ತದೆ. ಆದಾಗ್ಯೂ ಹಾಲೀ ಇರುವ ಭೂಮಾಪಕರುಗಳಿಂದ ಒತ್ತುವರಿಯಾಗಿರುವ ಕೆರೆ ಅಂಗಳದ ಜಮೀನನ್ನು ಗುರುತಿಸುವಂತೆ ಸಂಬಂಧಪಟ್ಟ ಎಲ್ಲಾ ಕಾರ್ಯಪಾಲಕ ಅಭಿಯಂತರುಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಈವರೆವಿಗೂ ಸುಮಾರು 97 ಕೆರೆಗಳ ಭೂಮಾಪನ ಕಾರ್ಯವನ್ನು ನಡೆಸಿ ಒತ್ತುವರಿಯಾಗಿರುವ ವಿಸ್ತೀರ್ಣ ಗುರುತಿಸಲಾಗಿರುತ್ತದೆ. ಒತ್ತುವರಿಯಾಗಿರುವ ಕೆರೆ ಜಮೀನನ್ನು ತೆರವುಗೊಳಿಸಲು ಕಂದಾಯ ಹಾಗೂ ಭೂಮಾಪನ ಇಲಾಖೆಗಳ ಸಹಕಾರದೊಂದಿಗೆ ನಿಯಮಾನುಸಾರ ಕ್ರಮವನ್ನು ಕೈಗೊಳ್ಳಲಾಗುತ್ತಿವೆ. ಆದುದರಿಂದ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಸದ್ಯಕ್ಕೆ ಸುಗ್ರಿವಾಜ್ಞೆ ಹೊರಡಿಸುವ ಅವಶ್ಯಕತೆ ಇರುವುದಿಲ್ಲ.

**ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಿರುಸೇತುವೆ ಅಣೆಕಟ್ಟಿನ ನಿರ್ವಹಣೆ ಸಮರ್ಪಕವಾಗಿ ಇಲ್ಲದೇ ಇರುವ ಬಗ್ಗೆ**

4409 (5076) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಅನಗಳ್ಳಿ ಗ್ರಾಮದ ಮೂಲಕ ಬಸ್ರೂಗೆ ಸಂಪರ್ಕಿಸುವ ಕಿರುಸೇತುವೆ ಹಾಗೂ ಅಣೆಕಟ್ಟು ನಿರ್ವಹಣೆ ಇಲ್ಲದೆ ನಿರ್ಲಕ್ಷಕ್ಕೆ ಒಳಗಾಗಿ ಲಘು ವಾಹನ ಓಡಾಡಲು ಅಪಾಯದ ಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸೇತುವೆಯ ಮೂಲ ಉದ್ದೇಶವಾದ ಲಘು ವಾಹನಗಳ ಸಂಚಾರ ಮತ್ತು ಕಿಂಡಿ ಅಣೆಕಟ್ಟಾಗಿ ಉಪಯೋಗಿಸುವ ಯೋಜನೆ ಕಾರ್ಯಗತವಾಗದೇ ಇರಲು ಕಾರಣವೇನು;

ಇ) ಈ ಸೇತುವೆಯನ್ನು ಲಘು ವಾಹನಗಳ ಮುಕ್ತ ಸಂಚಾರಕ್ಕೆ ಯೋಗ್ಯವಾಗಿ ನಿರ್ವಹಣೆ ಮಾಡಲಾಗುವುದೇ;

ಈ) ಈ ಕಿರು ಸೇತುವೆಯ ಬದಲು ಬಸ್ರೂರು ಆನಗಳ್ಳಿ ಮೂಲಕ ಕುಂದಾಪುರಕ್ಕೆ ಸಂಪರ್ಕಿಸುವ ಹೊಸ ಸೇತುವೆಯನ್ನು ನಿರ್ಮಿಸುವ ವಿಚಾರ ಸರಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ ಈ ಸೇತುವೆಯನ್ನು ಎಷ್ಟು ವೆಚ್ಚದಲ್ಲಿ ಯಾವಾಗ ನಿರ್ಮಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಕುಂದಾಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕುಂದಾಪುರ ತಾಲ್ಲೂಕಿನ ಆನಗಳ್ಳಿ ಗ್ರಾಮದ ಬಸ್ರೂರಿಗೆ ಸಂಪರ್ಕಿಸುವ ಸ್ಥಳದಲ್ಲಿ ಕಾಲು ಸೇತುವೆ ಸಹಿತ ಉಪ್ಪು ನೀರು ತಡೆ ಅಣೆಕಟ್ಟನ್ನು 1983–84 ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗಿದೆ. ಇದು ಕಾಲು ಸೇತುವೆ ಸಹಿತ ಉಪ್ಪು ನೀರು ತಡೆ ಅಣೆಕಟ್ಟು ಕಾಮಗಾರಿಯಾಗಿದ್ದು ಕಾಲು ಸೇತುವೆಯು ಲಘು ವಾಹನ ಓಡಾಟಕ್ಕೆ ಬೇಕಾಗುವ ವಿನ್ಯಾಸವನ್ನು ಹೊಂದಿಲ್ಲದ ಕಾರಣ ಇದರಲ್ಲಿ ಲಘು ವಾಹನ ಸಂಚಾರಕ್ಕೆ ಅನುಮತಿ ಇರುವುದಿಲ್ಲ.

ಆ) ಈ ಕಾಲು ಸೇತುವೆಯನ್ನು ಲಘು ವಾಹನ ಸಂಚಾರಕ್ಕೆ ವಿನ್ಯಾಸಗೊಳಿಸಿದ ಕಾರಣ, ಇದಕ್ಕಗಿ ಉಪಯೋಗಿಸಲು ಕಾರ್ಯಗತ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಚ್ಚುಕಟ್ಟು ಪ್ರದೇಶದಲ್ಲಿರುವ ನೂರಾರು ಸಿಗಡಿ ಮೀನು ಕೃಷಿಕರಿಗೆ ಉಪ್ಪು ನೀರು ಅವಶ್ಯಕತೆ ಇರುವುದರಿಂದ ಸದರಿಯವರ ಪ್ರತಿಭಟನೆಯಿಂದಾಗಿ ಕಿಂಡಿಗಳಿಗೆ ಹಲಗೆ ಅಳವಡಿಸಲು ಸಾಧ್ಯವಾಗುತ್ತಿಲ್ಲ ಹಾಗೂ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ

ಇ) ಕಾಲು ಸೇತುವೆಯು ಲಘು ವಾಹನ ಓಡಾಟಕ್ಕೆ ಬೇಕಾಗುವ ವಿನ್ಯಾಸವನ್ನು ಹೊಂದಿಲ್ಲದ ಕಾರಣ ಇದನ್ನು ಲಘು ವಾಹನ ಸಂಚಾರಕ್ಕೆ ಯೋಗ್ಯವಾಗಿ ನಿರ್ವಹಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಅಂತಹ ಪ್ರಸ್ತಾವನೆ ಈ ಇಲಾಖೆಯಲ್ಲಿ ಇರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿ ಕೆರೆಗಳ ಹೂಳನ್ನು ತೆಗೆದಿರುವುದು**

4416 (5049) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಕೆರೆಗಳ ಹೂಳನ್ನು ತೆಗೆಯಲಾಗಿದೆ; ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು;

ಆ) ಹಾಗಿದ್ದರೆ, ಪ್ರತಿಯೊಂದು ಕೆರೆಯ ಹೂಳನ್ನು ತೆಗೆಯಲು ಖರ್ಚಾಗಿರುವ ಹಣವೆಷ್ಟು; ಪ್ರತಿಯೊಂದು ಕೆರೆಯ ವಿವರ ನೀಡುವುದು;

ಇ) ಕೆರೆಗಳ ಹೂಳು ತೆಗೆಯಲು ಎಷ್ಟು ಹಣವನ್ನು ನಿಗದಿಪಡಿಸಲಾಗಿತ್ತು; ಈ ಹಣವನ್ನು ಯವ ಸಂಸ್ಥೆಯಿಂದ ಸಾಲ ಪಡೆಯಲಗಿದೆ; ಈ ಹಣಕ್ಕೆ ತಿಂಗಳು ನೀಡುತ್ತಿರುವ ಬಡ್ಡಿ ಎಷ್ಟು;

ಈ) ಕೆರೆಗಳ ಹೂಳನ್ನು ಸ್ವಲ್ಪವೇ ತೆಗೆದು ಪೂರ್ತಿ ಹಣವನ್ನು ಗುತ್ತಿಗೆದಾರರು ಪಡೆದಿರುವುದು ನಿಜವೇ;

ಉ) ಹಾಗಿದ್ದರೆ ಈ ಗುತ್ತಿಗೆದಾರರುಗಳ ಮೇಲೆ ಹಗೂ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ :

1. ಸಣ್ಣ ನೀರಾವರಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿ : 724 ಕೆರೆಗಳು
2. ಸಣ್ಣ ನೀರಾವರಿ ಉತ್ತರ ವಲಯದ ವ್ಯಪ್ತಿಯಲ್ಲಿ: 119 ಕರೆಗಳು

ಒಟ್ಟು **843**

ಭಾಗಶಃ ಹೂಳು ತೆಗೆಯಲಾಗಿದೆ.

ಜಿಲ್ಲವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೂಳು ತೆಗೆಯುವ ಕಾರ್ಯವೂ ಸೇರಿದಂತೆ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ 2003–04ನೇ ಸಾಲಿನ ಆಯವ್ಯಯದಲ್ಲಿ 1000.01 ಲಕ್ಷ ರೂ.ಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಅಲ್ಲದೆ, ಕರ್ನಾಟಕ ನೀರಾವರಿ ನಿಗಮ ದಿಂದ 20.00 ಕೋಟಿ ರೂ. ಸಹಾಯಧನ ನಿಗದಿಪಡಿಸಲಾಗಿದೆ.